ರೇಟ್ ಫಿಕ್ಸ್ ಮಾಡತಕ್ಕದ್ದು ಎರಡನೇಯ ವಿಚಾರ. ಆದರೆ ಇವತ್ತು ಹಗಲು ದರೋಡೆಯನ್ನು ಮಾಡುತ್ತಿದ್ದಾರೆ. ತಿಪಟೂರಿನಲ್ಲಿ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿಯಂ ವಹಿವಾಟು ನಡೆಯುತ್ತಿದೆ ಒಂದು ದಿವಸಕ್ಕೆ ೫೦ ಲಕ್ಷ ರೂಪಾಯಿ ಲಾಭವಮಾಡುತ್ತಿದ್ದಾರೆ. ತಿಪಟೂರು ಅರಿಸೀಕೆರೆಯಲ್ಲಿ ಕೊಬ್ಬರಿ ಮಾರುವ ವರ್ತಕರ ಮೇಲೆ ಕಾನೂನನ್ನು ಬಿಗಿ ಮಾಡಿ, ಗುಂಡಾ ಶಾಸನವನ್ನು ಜಾರಿ ಮಾಡಿ, ಈಗಿರುವ ಕಾನೂನನ್ನು ಬಿಗಿ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನಾಳೆಯೇ ಈ ಬಗ್ಗೆ ಒಂದು ಕಮಿಟಿ ಮಾಡಿ. ಜೊತೆಗೆ ಕೇಂದ್ರ ಸರ್ಕಾರದ ಜೊತೆಗೂ ಸಮಾಲೋಚನೆ ಮಾಡಿ, ತಾವು ಸಹಿತ ವ್ಯವಸಾಯಗಾರರಿದ್ದೀರಿ, ತಮಗೆ ವ್ಯವಸಾಯದಲ್ಲಿ ಬಹಳ ಅನುಭವವಿದೆ. ತಾವು ರೈತರ ಬಗ್ಗೆ ಕಾಳಜಿ ಇರತಕ್ಕವರಿದ್ದೀರಿ, ಅದರ ಬಗ್ಗೆ ಎರಡನೇ ಮಾತಿಲ್ಲ. ಆದರೆ ತಿಪಟೂರಿನಲ್ಲಿ ರೈತ ಏನಾಗುತ್ತಿದ್ದಾರೆಂದರೆ ನಮ್ಮ ಒಂದು ಬಡ ತಾಲ್ಲೂಕಿನಲ್ಲಿ ರೈತರು ಉಳುವುದಕ್ಕೆ ಉಪಯೋಗಿಸುತ್ತಿದ್ದ ಟ್ರಾಕ್ಟರುಗಳನ್ನು ಇವತ್ತು ಮಾರಾಟ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ೭೦ ಟ್ರಾಕ್ಟರುಗಳಲ್ಲಿ ಈಗಾಗಲೇ ೪೦ ಟ್ರಾಕ್ಟರುಗಳನ್ನು ಮಾರಾಟ ಮಾಡಿದ್ದಾರೆ. ದೀಸಲ್‌ಗೆ ದುಡ್ಡು ಇಲ್ಲದೆ ಮತ್ತು ಕಂತಿನ ಹಣ ಕಟ್ಟಲು ಸಾಧ್ಯವಾಗದೆ ಹೀಗೆ ಮಾಡಿದ್ದಾರೆ.

ಉಪಾಧ್ಯಕ್ಷಣಿಯವರು.—ಮಾನ್ಯ ಶಿವರಾಮೇಗೌಡರೇ ಅವರು ಏನು ಹೇಳಿದ್ದಾರೆ. ಆದರ ಬಗ್ಗೆ ಇನ್ನೇನಾದರೂ ವಿಷಯವಿದ್ದರೆ ಆ ಬಗ್ಗೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರ ಕಾಳಜಿಯನ್ನು ವ್ಯಕ್ತ ಮಾಡಿದ್ದಾರೆ. ಇದರ ಬಗ್ಗೆ ಸಮಿತಿ ಮಾಡಬೇಕು. ಅವರು ಕೇಂದ್ರ ಸರ್ಕಾರದವರ ಬಳಿಗೆ ಹೋಗಿ ಬರುವುದರೊಳಗೆ ಕಂಪ್ಲೀಟ್ ಆಗಿ ರೈತರೆಲ್ಲ ಮುಳುಗಿ ಹೋಗುತ್ತಾರೆ. ಒಂದು ಕಡೆ ರೈತರ ಸಾಲ ಮನ್ನಾವಾಗುವ ವಿಚಾರದಲ್ಲಿ ಇಷ್ಟೊಂದು ವಿಳಂಬವಾಗಿದೆ. ಆ ವಿಚಾರದಲ್ಲಿ ಹೀಗಾದರೆ ರೈತನ ರಕ್ಷಣೆಗೆ ಹೋಗುವವರು ಯಾರು ? ಇದನ್ನು ಮನದಟ್ಟು ಮಾಡಿಕೊಳ್ಳಬೇಕು. ಈಗ ಹಗಲುದರೋಡೆ ರೈತನ ಮೇಲೆ ನಡೆಯುತ್ತಿದೆ. ಇದನ್ನೆಲ್ಲಾ ಯಾರು ತಗ್ಗಿಸಬೇಕು ? ಈ ಬಗ್ಗೆ ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿ Supportig price. ಮೂರು ಸಾವಿರ ಫಿಕ್ಸ್ ಮಾಡುತ್ತೇವೆ. ಈ ರೇಟ್‌ನಲ್ಲಿ ತೆಗೆದುಕೊಳ್ಳಿ ಎಂದು ಒಂದು ಆದೇಶವನ್ನು ಅವರಿಗೆ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳುವ ಒಂದು ವಿಚಾರದಲ್ಲಿ ಬಹಳ ಅರ್ಥವಿದೆ. ಇವತ್ತು ಕೇಂದ್ರ ಸರ್ಕಾರದ ಜೊತೆಯಲ್ಲಿ ನಾವು ಹೋಗಿ ಮಾತನಾಡಲಿ, ಅಧಿಕಾರಿಗಳು ಕಳುಹಿಸಿ, ಅಥವಾ ಅವರೇ ಇಲ್ಲಿಗೆ ಬರಲಿ, ಅದು ಟೈಮ್ ಕನ್‌ಸೂಮಿಂಗ್ ಫ್ಯಾಕ್ಟರ್. ಈ ಕೊಬ್ಬರಿ ವ್ಯಾಪಾರಕ್ಕೆ ಈಗ ತಿಪಟೂರು ಕೇಂದ್ರವಾಗಿರುವ ಸ್ಥಳ, ಬೇಕಾದಷ್ಟು ಅಲ್ಲಿ ಸುಲಿಗೆಗಳನ್ನು ರೈತರಿಗೆ ವರ್ತಕರು ಮಾಡುತ್ತಿದ್ದಾರೆ. ಇದರ ಬಗ್ಗೆ ಯಾವರೀತಿ ಕಾನೂನು ಕ್ರಮ ತೆಗೆದುಕೊಳ್ಳಬಹುದು ಎಂಬ ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಸಲಹೆಯನ್ನು ಮಾಡುತ್ತಿದ್ದಾರೆ ಇದಕ್ಕೆ ಸಮಿತಿಯನ್ನು ಮಾಡಿ ಎಂದು ಹೇಳುತ್ತಾರೆ, ದಯಮಾಡಿ ಸದಸ್ಯರು ಕ್ಷಮಿಸಬೇಕು. ಆ ಅಭಿಪ್ರಾಯವನ್ನು ಅವರು ಹಿಂದಕ್ಕೆ ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ ಒಂದೊಂದು ಬೆಳೆಯ ಬೆಲೆಯ ವಿಚಾರದಲ್ಲಿ ತಕರಾರು ಇರಬೇಕಾದರೆ ಕೊಬ್ಬರಿಗೆ ಒಂದು ಸಮಿತಿ. ಭತ್ತಕ್ಕೆ ಒಂದು ಸಮಿತಿ ನಾಳೆ ಮಾಡುವ ಸಂದರ್ಭ ಬರುತ್ತದೆ. ಆದಕ್ಕಾಗಿ ಅದು ಬೇಡ, ತಕ್ಷಣ ಅಂದರೆ ನಾಳೆ ನಾಡಿದ್ದು ನಾನು ಪ್ರತ್ಯೇಕವಾಗಿ ಸಭೆಯನ್ನು ಕರೆಯುತ್ತೇನೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಕಾನೂನು ತಜ್ಞರು, ಯಾವ ಕಾನೂನು ಪ್ರಕಾರ ಮಾಡಿಕೊಳ್ಳಬೇಕು ಮತ್ತು ಎಲ್ಲಾ ಪಕ್ಷದ ಮಾನ್ಯ ಸದಸ್ಯರ ಮಂಡಿಂಡತನ್ನು ಕರೆದು ನಿಮ್ಮ ಹತ್ತಿರ ಚರ್ಚೆ ಮಾಡುತ್ತೇನೆ. ಈಗ ಮಧ್ಯವರ್ತಿಗಳು ರೈತರಿಂದ ಏನು ಸುಲಿಗೆ ಮಾಡುತ್ತಿದ್ದಾರೆ ಅದಕ್ಕೆ ಒಂದು ಉಪಾಯ ಕಂಡುಹಿಡಿಯಬೇಕೆಂಬ ವಿಚಾರದಲ್ಲಿ ನಾವು ನೀವು ಸೇರಿ ನಿಮ್ಮ ಸಲಹೆ ಪಡೆದು ಕಾರ್ಯಕ್ರಮವನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡುತ್ತೇನೆ.

೨, ಕಾರವಾರದಲ್ಲಿ ಗೃಹ ನಿರ್ಮಾಣ ಮಂಡಳಿಯವರಂ ಕಟ್ಟುತ್ತಿರುವ ಮನೆಗಳ ನಿರ್ಮಾಣ ಹಂತದಲ್ಲಿಯೇ ಕುಸಿದಂ ಬಿದ್ದಿರಂವುದು.

ಶ್ರೀ ಪ್ರಭಾಕರ ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ಕಾರವಾರ ನಗರದಲ್ಲಿ ಗೃಹ ನಿರ್ಮಾಣ ಮಂಡಳಿಯವರು ಕಟ್ಟುತ್ತಿರುವ ಮನೆಗಳು ನಿರ್ಮಾಣ ಹಂತದಲ್ಲಿಯೇ ಕುಸಿದು ಬಿದ್ದಿರುವ ಬಗ್ಗೆ ಬಂದರು ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಪಿ. ಎಸ್. ರಾಣೆಯವರು ಸರ್ಕಾರದ ಗಮನವನ್ನು ಸೆಳೆದು ಇತ್ತೀಚೆಗೆ ಕಾರವಾದ ನಗರದಲ್ಲಿ ಗೃಹ ನಿರ್ಮಾಣ ಮಂಡಳಿಯವರು ಕಟ್ಟುತ್ತಿರುವ ಕೆಲವು ಮನೆಗಳು ಕುಸಿದು ಬಿದ್ದಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸರ್ಕಾರದ ಉತ್ತರ ಈ ರೀತಿ ಇದೆ.

ಕಾರವಾರದಲ್ಲಿ ಮನೆಗಳನ್ನು ಹುಡ್ಕೋ ನೆರವಿನಿಂದ ಹಾಗೂ ಹುಡ್ಕೋ ನಿಬಂಧನೆಗಳಿಗೆ ಮತ್ತು ನಿಗಧಿತ ವೆಚ್ಚಗಳ ಮಿತಿಯಲ್ಲಿ ಮನೆಗಳನ್ನು ನಿರ್ಮಿಸಲು ನಾಲ್ಕು ಜನ ವಾಸ್ತುಶಿಲ್ಪಿಗಳಿಂದ ಸೂಕ್ತ ಸ್ಪೆಸಿಫಿಕೇಶನ್, ವಿನ್ಯಾಸ ಹಾಗೂ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದ ನಂತರ ಕಾರ್ಯಾರಂಭ ಮಾಡಲಾಗಿದೆ. ಸಧ್ಯದಲ್ಲಿ ೭೫೭ ಮನೆಗಳ ನಿರ್ಮಾಣ ಕಾರ್ಯವನ್ನು ಮೂರು ಗುತ್ತಿಗೆದಾರರಿಗೆ ವಹಿಸಲಾಗಿದೆ. ಈ ಮೂರು ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಟ್ಟ ಪ್ರಥಮ ದರ್ಜೆ ಗುತ್ತೆದಾರರಾಗಿದ್ದಾರೆ.

ಈ ಯೋಜನೆಯಡಿಯಲ್ಲಿ ನಿರ್ಮಿಸುತ್ತಿರುವ ಮನೆಗಳಿಗೆ ಮಂಜೂರಾದ ಅಂದಾಜು ಪಟ್ಟಿಯಂತೆ ಸ್ಥಳೀಯವಾಗಿ ದೊರೆಯುವ ಲ್ಯಾಟರೈಟ್ ಕಲ್ಲು ಹಾಗೂ ಮಣ್ಣಿನ ಗಾರೆಯನ್ನು ಉಪಯೋಗಿಸಲಾಗುತ್ತಿದೆ. ಸದರಿ ಮನೆಗಳನ್ನು ಅಡಿಪಾಯ ಮತ್ತು ಪ್ಲೇಸ್‌ಮೆಂಟ್ ಮಟ್ಟದವರೆಗೆ ಲ್ಯಾಟರೈಟ್ ಕಲ್ಲು ಮತ್ತು ಸಿಮೆಂಟ್ ಗಾರೆಯಲ್ಲಿಯೂ ಮೇಲುಮಟ್ಟದ ಕಟ್ಟಡವನ್ನು ಲ್ಯಾಟರೈಟ್ ಕಲ್ಲು ಮತ್ತು ಮಣ್ಣಿನಿಂದಲೂ ಕಟ್ಟಲಾಗುತ್ತಿದೆ.

ಸಾಮಾನ್ಯವಾಗಿ ಮಳೆಗಾಲ ಪ್ರಾರಂಭವಾಗುವುದು ಜೂನ್ ತಿಂಗಳ ಮೊದಲನೇ ವಾರದಲ್ಲಿ, ಆದರೆ ದಿನಾಂಕ ೨೦.೫.೧೯೯೦ ರಂದು ಬಿದ್ದ ೮೨ ಸೆ. ಮೀ. ಅನಿರೀಕ್ಷಿತ ಭಾರೀ ಮಳೆಯು ಪ್ರಯುಕ್ತ ೧೪ ಅಡಿ ಎತ್ತರದ ಮಣ್ಣಿನ ಗಾರೆಯಿಂದ ಕಟ್ಟಿದ ಗೋಡೆಗಳ ಮೇಲಿನ ಕೆಲವು ವರಸೆಗಳು ಕುಸಿದು ಬಿದ್ದಿವೆ.

ಯಾವ ಮನೆಗಳ ಗೋಡೆಗಳು ಮಣ್ಣಿನಲ್ಲಿಯೇ ಕಟ್ಟಿ, ಸಿಮೆಂಟ್ ಗಾರೆ ಮತ್ತು ಸಂಯುಗಾರೆ ಮಾಡಿ ಪೂರ್ತಿಗೊಳಿಸಲಾಗಿದೆಯೋ ಆ ಮನೆಗಳು, ಮತ್ತು ಯಾವ ಮನೆಗಳಿಗೆ ಮೇಲ್ಚಾವಣಿ ಹಾಕಲಾಗಿದೆಯೋ ಆ ಮನೆಗಳಿಗೆ ಯಾವ ಧಕ್ಕೆಯೂ ಉಂಟಾಗಿಲ್ಲ.

ಜನರ ಬೇಡಿಕೆಯಂತೆ ಎಲ್ಲಾ ಮನೆಗಳನ್ನು ಸಿಮೆಂಟ್ ಗಾರೆಯಲ್ಲಿ ನಿರ್ಮಿಸಬೇಕಾದರೆ ಸುಮಾರು ರೂ. ೨೨ ಲಕ್ಷ ಅಧಿಕವಾಗಬಹುದು. ಈ ರೀತಿ ಹೆಚ್ಚು ವೆಚ್ಚಕ್ಕೆ ಹುಡ್ಕೋದವರು ಆಕ್ಷೇಪಿಸುವರು, ಮತ್ತು ಹೆಚ್ಚು ಬಡ್ಡಿಯನ್ನು ವಿಧಿಸುವರು.

ಮೇ ತಿಂಗಳಲ್ಲಿ ಬಿದ್ದ ಭೀಕರ ಮತ್ತು ಅನಿರೀಕ್ಷಿತ ಮಳೆಯು ಪರಿಣಾಮದಿಂದ ನಿರ್ಮಾಣ ಹಂತದಲ್ಲಿರುವ ೭೫೭ ಮನೆಗಳ ಪೈಕಿ ಸುಮಾರು ೩೦ ಮನೆಗಳ ಗೋಡೆಗಳ ಕೆಲವು ವರಸೆಗಳು ಮಾತ್ರ ಬಿದ್ದಿರುತ್ತವೆ.

ಈ ರೀತಿ ಗೋಡೆಗಳು ಕುಸಿಯಲು ನಿರ್ದಿಷ್ಟ ಕಾರಣಗಳನ್ನು ಕಂಡುಹಿಡಿಯಲು ನಿಷ್ಪಕ್ಷಪಾತವಾದ ತಾಂತ್ರಿಕ ಸಲಹಾ ಸಮಿತಿಯನ್ನು ಗೃಹ ಮಂಡಳಿಯಿಂದ ರಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆದ್ದರಿಂದ, ಸದರಿ ಗೃಹ ನಿರ್ಮಾಣ ಯೋಜನೆ ಮೂಲಭೂತವಾಗಿ ದೋಷ ಪೂರಿತವಾದುದಲ್ಲ. ಈ ನಿರ್ಮಾಣವನ್ನು ಹುಡ್ಕೋ ನಿಬಂಧನೆಗಳಿಗೆ ಒಳಪಟ್ಟು ಕೈಗೊಂಡಿರುತ್ತದೆ.

ಮಾನ್ಯ ಅಧ್ಯಕ್ಷರೇ, ಈ ಸಂಬಂಧವಾಗಿ ಮಾನ್ಯ ಸದಸ್ಯರ ಗಮನಕ್ಕೆ ನಾನೊಂದು ವಿಷಯವನ್ನು ತರಬಯಸುವುದೇನೆಂದರೆ, ಈ ಬಗ್ಗೆ ವರದಿಗಳು ಸಂಯುಕ್ತ ಕರ್ನಾಟಕ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿಲ್ಲಿ ಬಂದಿದ್ದನ್ನು ನಾನು ಓದಿದ್ದೇನೆ. ಈ ವರದಿಗಳು ಬಂದ ತಕ್ಷಣ ನಮ್ಮ ಕಛೇರಿಯಿಂದ ನಮ್ಮ ಗೃಹ ಕಮಿಷನರ್‌ಗೆ ಒಂದು ಆದೇಶವನ್ನು ಕೊಟ್ಟು ನೀವು ಸ್ಥಳಕ್ಕೆ ಹೋಗಿ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವರದಿಗಳು ಎಷ್ಟರ ಮಟ್ಟಿಗೆ ಸತ್ಯವಾಗಿವೆ ಎನ್ನುವ ಸತ್ಯಾಸತ್ಯತೆಯನ್ನು ವರದಿ ಮಾಡಬೇಕೆಂದು ಹೇಳಿದೆ. ಆಗ ಅವರು ಮತ್ತು ಅವರ ಜೊತೆಯಲ್ಲಿ ಮುಖ್ಯ ಇಂಜನೀಯರ್‌ರವರು ಭೇಟಿ ಕೊಟ್ಟು ಸ್ಥಳ ಪರೀಕ್ಷೆ ಮಾಡಿ ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಆ ವರದಿ ಸುಮಾರು ೩೦ ಮನೆಗಳ ಮೇಲ್ಚಾವಣಿ ಕುಸಿದು ಬಿದ್ದಿದೆ ಎಂದು ತಿಳಿಸಿದ್ದಾರೆ. ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡು ಆ ಮನೆಗಳ ರಿಪೇರಿ ಕೆಲಸವನ್ನು ಆ ಕಂಟ್ರಾಕ್ಟ್‌ದಾರರೇ ಸ್ವತಃ ತಮ್ಮ ಖರ್ಚಿನಿಂದ ಮಾಡಿ ಕೊಡಬೇಕೆಂದು ಆದೇಶವನ್ನು ಈಗಾಗಲೇ ಕೊಟ್ಟಿದ್ದೇನೆ. ಅವಕ್ಕೆ ಅವರು ಸಹ ಒಪ್ಪಿಕೊಂಡಿದ್ದಾರೆ. ಮತ್ತು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುವುದಕ್ಕೆ ತಜ್ಞರು ಇರುವಂತಹ ೩ ಜನರ ಒಂದು ಸಮಿತಿಯೊಂದನ್ನು ರಚನೆ ಮಾಡಂತ್ತಿದ್ದೇವೆ ಎಂಬ ವಿಚಾರವನ್ನು ತಮ್ಮ ಮೂಲಕ ಘೋಷಣೆ ಮಾಡುತ್ತಿದ್ದೇನೆ.

1) T. J. Das,
Retired Chief Architect,
Govt. of Karnataka.
Bangalore.

2) Dr. M.K.L N. Shashtry,
Head of Civil Engineering Department,
Visveswaraiah Engineering College.
Bangalore.

3) Regional Chief,
Housing and Urban Development Corporation,
Bangalore or his nominee.

ಈ ಮೂರು ಜನರ ತಜ್ಞರ ಸಮಿತಿಯನ್ನು ನಾವು ಈಗಾಗಲೇ ರಚಿಸಿದ್ದೇವೆ. ಅವರು ತಮ್ಮ ಅಭಿಪ್ರಾಯವನ್ನು ಇನ್ನು ೧೫ ದಿವಸಗಳಲ್ಲಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಿದ್ದೇವೆ. ಆ ೩೦ ಮನೆಗಳ ಮೇಲ್ಛಾವಣಿಯಲ್ಲಿ ಗಾರ್ ಪ್ಲಾಸ್ಟರ್ ಮಾಡುವ ಹಂತದಲ್ಲಿ ಭಾರಿ ಮಳೆ ಬಂದಿದ್ದರಿಂದ ಈ ರೀತಿ ಆಗಿದೆ. ಈ ಬಗ್ಗೆ ಮಾನ್ಯ ಸದಸ್ಯರು ಇನ್ನೂ ಏನಾದರೂ ಅಭಿಪ್ರಾಯ ಕೊಡುವುದಾದರೆ, ಅದನ್ನೂ ಸಹ ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ. ಈ ಬಗ್ಗೆ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗಬೇಕು ಎನ್ನುವ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಸಚಿವರು ನೀಡಿದಂತಹ ಉತ್ತರದಲ್ಲಿ ಒಂದು ಮಾತು ಹೇಳಿದ್ದಾರೆ ಸುಮಾರು ೭೫೭ ಮನೆಗಳ ಕಾರ್ಯವನ್ನು ೩ ಜನ ಗುತ್ತಿಗೆದಾರರಿಗೆ ವಹಿಸಲಾಗಿತ್ತು ಎಂದು. ಈ ಮೂರು ಜನ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯ ಪ್ರಥಮ ದರ್ಜೆ ಗುತ್ತಿಗೆ ದಾರರು ಎಂದು ಹೇಳಿದ್ದಾಗಿ. ಈ ಗುತ್ತಿಗೆದಾರರಲ್ಲಿ ಒಬ್ಬರನ್ನು ಈ ಹಿಂದೆ ಗೃಹ ಮಂಡಲಿ ಬ್ಲಾಕ್‌ಲಿಸ್ಟ್‌ಗೆ ಸೇರಿಸಿದ್ದು ನಿಜವೇ ಹೇಗೆ? ಇದರಲ್ಲಿ ಕೇವಲ ಖಾಸಗಿ ಗುತ್ತಿಗೆದಾರರು ಮಾತ್ರವಲ್ಲ, ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಏನಿದೆ ಅದೂ ಸಹ ಈ ಕೆಲಸವನ್ನು ವಹಿಸಿಕೊಂಡಿದೆ.

ಹೀಗೆ ಒಬ ಸರ್ಕಾರಿ ಅಧೀನದಲ್ಲಿರತಕ್ಕಂಥ ಗುತ್ತಿಗೆ ಸಂಸ್ಥೆ ಮತ್ತು ಬ್ಲಾಕ್ ಲಿಸ್ಟ್‌ನಲ್ಲಿರತಕ್ಕಂಥ ಗುತ್ತಿಗೆ ದಾರರಿಂದ ನಡೆಸಿದಂಥ ಈ ಮನೆಗಳ ಗುಣಮಟ್ಟದ ಬಗ್ಗೆ ಈಗ ಹೆಚ್ಚಿಗೆ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ ನಾನು ಈಗಾಗಲೇ, ಈ ಮನೆಗಳು ಕುಸಿದು ಬೀಳುವ ಮೊದಲೇ ಮಾನ್ಯ ಮಂತ್ರಿಗಳಿಗೆ ಈ ವಿಚಾರವನ್ನು ತಿಳಿಸಿದ್ದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದೂ ನಿಜ. ಆದರೆ ಏನಾಗಿದೆಯೆಂದರೆ ನಾನು ಈ ಸೂಚನೆಯಲ್ಲಿ ಹೇಳಿದ ಹಾಗೆ, ಈ ಕೆಲಸದಲ್ಲಿ ಕಳಪೆಯಾಗಿದೆಯಷ್ಟೇ ಅಲ್ಲದೆ, ದೋಷಪೂರಿತ ಯೋಜನೆ ರೂಪಿಸಿದ್ದಾರೆಂದು ನನ್ನ ಆಕ್ಷೇಪಣೆ. ಏಕೆಂದರೆ ಕಾರವಾರ ಇರುವುದು ಕರಾವಳಿ ಪ್ರದೇಶದಲ್ಲಿ. ಅತಿ ಹೆಚ್ಚು ಮಳೆ ಬೀಳುವಂಥ ಪ್ರದೇಶ. ಅತಿ ಹೆಚ್ಚು ಮಳೆ ಬೀಳುವಂಥ ಪ್ರದೇಶದಲ್ಲಿ ಯಾವ ರೀತಿ ಮನೆಗಳನ್ನು ಕಟ್ಟಬೇಕೆಂದು ಯೋಚನೆ ಮಾಡದೇ ಇದ್ದರೆ ಸರ್ಕಾರ ಮಾಡಿದಂಥ ಯೋಜನೆ ಸಂಪೂರ್ಣವಾಗಿ ನಿರರ್ಥಕವಾಗುತ್ತದೆನ್ನುವುದು ಈ ಮನೆಗಳು ಕುಸಿದು ಬಿದ್ದಿರುವುದಕ್ಕೆ ನಿದರ್ಶನವಾಗುತ್ತದೆ. ನನಗೆ ತಿಳಿದು ಬಂದಿರುವ ಹಾಗೆ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಲ್ಲಿ ಅನೇಕ ಇಂಜಿನೀಯರ್‌ಗಳಿದ್ದಾರೆ. ಅವರು ಕರ್ನಾಟಕ ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಯಾವ ಮಟ್ಟದ ಮನೆಗಳನ್ನು ಕಟ್ಟಬೇಕೆಂದು ಯೋಚನೆ ಮಾಡಬೇಕು. ಇಲ್ಲಿ ಏನಾಗಿದೆಯೆಂದರೆ, ಮನೆಗಳು ಕುಸಿದು ಬಿದ್ದಿರುವುದನ್ನು ಗುತ್ತಿಗೆದಾರರುಗಳೇ ಪುನ: ಕಟ್ಟಿಸುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಸರ್ಕಾರಕ್ಕೆ ಲಂಚವನ್ನು ಆಗುವುದಿಲ್ಲವೆಂದು ಹೇಳಿದ್ದಾರೆ. ಇಲ್ಲಿ ಆದು ಪ್ರಾಮುಖ್ಯವಾದ ಪ್ರಶ್ನೆ ಇಲ್ಲ. ನಿರ್ಮಾಣ ಹಂತದಲ್ಲೇ ಮನೆಗಳು ಕುಸಿದುಬಿದ್ದಿರಬೇಕಾದರೆ ಇನ್ನು ಪೂರ್ತಿಯಾದ ನಂತರ ಅವುಗಳ ಅವಸ್ಥೆ ಏನು ಎಂದು ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ, ಮಾನ್ಯ ಸಚಿವರು ಲೋಕಲ್ ಆಗಿ ಅವೈಲಬಲ್ ಆಗಿರುವಂಥ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲಿಕ್ಕೆ ನಕ್ಷೆಗಳನ್ನು ತಯಾರಿಸಲಾಗಿದೆಯೆಂದು ಹೇಳಿದ್ದಾರೆ. ನಾನು ಒಂದೇ ಮಾತಿನಲ್ಲಿ ಹೇಳಬೇಕಾದರೆ, ಈ ಮನೆಗಳನ್ನು ಹೇಗೆ ಕಟ್ಟಿದ್ದಾರೆಂದು

ಮಾನ್ಯ ಮಂತ್ರಿಗಳು ನೋಡಬೇಕು. ಈ ಮನೆಗಳನ್ನು ನೋಡಿದರೆ ನನಗೆ ಬಹಳಷ್ಟು ದುಃಖವಾಗುತ್ತದೆ. ಜಿಲ್ಲಾಪರಿಷತ್ತುಗಳ ಮುಖ್ಯಾಂತರ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಮುಖ್ಯಾಂತರ ೬ ಸಾವಿರ, ೭ ಸಾವಿರ, ೮ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟುವ ಜನತಾ ಮನೆಗಳಿಗಿಂತಲೂ ಈ ಮನೆಗಳ ಕಟ್ಟಡಗಳು ಬಹಳ ನಿಕೃಷ್ಟವಾಗಿದೆ. ಈ ಮನೆಗಳಲ್ಲಿ ಮೂರು ತರಗತಿಗಳಲ್ಲಿ ಕಟ್ಟಿಸುವ ಯೋಜನೆ ಇದೆ. ಎಲ್.ಐ.ಜಿ., ಎಂ.ಐ.ಜಿ., ಹೆಚ್.ಐ.ಜಿ., ಎಂದು ಈ ಮೂರು ಯೋಜನೆಗಳಲ್ಲಿ ಎಲ್ ಐ.ಜಿ. ಮನೆಗಳಿಗೆ ೪೦ ಸಾವಿರದಿಂದ ೪೫ ಸಾವಿರ ರೂಪಾಯಿ ವೆಚ್ಚದಲ್ಲಿ, ಎಂ ಐ.ಜಿ. ಮನೆಗಳನ್ನು ೬೦ ರಿಂದ ೭೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಹಾಗೂ ಹೆಚ್.ಐ.ಜಿ. ಮನೆಗಳನ್ನು ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಬೇಕಾಗುತ್ತದೆ. ಇಷ್ಟು ದುಡ್ಡು ಕೊಟ್ಟು ಮನೆಗಳನ್ನು ಪಡೆದುಕೊಳ್ಳುವಂತಹ ಜನರಿಗೆ ಈ ರೀತಿಯ ಮನೆಗಳನ್ನು ದೊರಕಿಸಿ ಕೊಟ್ಟರೆ ಆ ಜನರ ಗತಿ ಏನಾಗಬಹುದು, ತಾವು ಇದನ್ನು ಗಂಭೀರವಾಗಿ ವಿಚಾರ ಮಾಡಬೇಕು. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾಡಿರುವ ವಾದದ ಅರ್ಥವನ್ನು ನಾನು ತಿಳಿದುಕೊಂಡೆ. ಇನ್ನು ಮುಂದೆ ಯಾವ ಕಾಲಕ್ಕೂ ಈ ರೀತಿ ವಾದ ವಿವಾದಗಳು ಬರದಂತೆ ಗೃಹ ನಿರ್ಮಾಣ ಮಂಡಳಿಯ ವತಿಯಿಂದ ಗುಣಮಟ್ಟದ ಕಟ್ಟಡಗಳನ್ನು ಕಟ್ಟಬೇಕೆಂದು ಗೃಹ ನಿರ್ಮಾಣ ಮಂಡಳಿಯಲ್ಲಿ ಒಂದು ತಜ್ಞರ ಸಮಿತಿಯನ್ನು ಮಾಡಲಾಗಿದೆ. ಮತ್ತೆ ಮಾನ್ಯ ಸದಸ್ಯರು ಕಾರವಾರದಲ್ಲಿ ಮನೆಗಳು ಕುಸಿದು ಬಿದ್ದಿರುವ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ವರದಿ ಕೊಡಬೇಕೆಂದು ತಜ್ಞರ ಸಮಿತಿಗೆ ತಿಳಿಸಿದ್ದೇನೆ. ಇನ್ನು ೧೫ ದಿನದೊಳಗೆ ಆ ಸಮಿತಿಯವರು ವರದಿಯನ್ನು ಕೊಡುತ್ತಾರೆ. ಆ ವರದಿಯ ಆಧಾರದ ಮೇಲೆ ಮತ್ತು ಅವರು ಮಾಡುವ ಮಾರ್ಗದರ್ಶನದ ಮೇಲೆ ಗೃಹ ನಿರ್ಮಾಣ ಮಂಡಳಿಯಲ್ಲಿ ಯಾವ ರೀತಿ ಕೆಲಸಗಳನ್ನು ಮಾಡಿಸಬೇಕೆಂದು ಹೆಜ್ಜೆ ಇಡುವುದಕ್ಕೆ ಎಚ್ಚರ ವಹಿಸುತ್ತೇನೆ. ಮತ್ತೆ ಈ ಮನೆಗಳನ್ನು ಕಟ್ಟಿರುವ ಕಂಟ್ರಾಕ್ಟ್‌ದಾರರುಗಳು ಬ್ಲಾಕ್ ಲಿಸ್ಟ್‌ನಲ್ಲಿ ಇದ್ದಾರೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಮನೆಗಳನ್ನು ಕಟ್ಟಿರುವ ಮೂರು ಜನ ಕಂಟ್ರಾಕ್ಟ್‌ದಾರರುಗಳಲ್ಲಿ ಯಾರೂ ಬ್ಲಾಕ್ ಪಟ್ಟಿಯಲ್ಲಿ ಇಲ್ಲವೆಂದು ಸ್ಪಷ್ಟವಾದ ಸ್ಪಷ್ಟೀಕರಣವನ್ನು ಹೇಳುತ್ತೇನೆ. ನನ್ನನ್ನು ಆ ಸ್ಥಳಕ್ಕೆ ಭೇಟಿ ಕೊಟ್ಟು ನೋಡಬೇಕೆಂದು ಹೇಳಿದ್ದಾರೆ. ಈಗ ಅಧಿವೇಶನ ಕಾಲವಾದ್ದರಿಂದ ಹೋಗುವುದು ಕಷ್ಟವಾಗಬಹುದು. ಸಾಧ್ಯವಾದರೆ ಶನಿವಾರ ಮತ್ತು ಭಾನುವಾರ ನನಗೆ ಬೇರೆ ಕಾರ್ಯಕ್ರಮ ಇಲ್ಲದಿದ್ದರೆ ಆ ಸ್ಥಳಕ್ಕೆ ಹೋಗಿ ಬರಲು ನಾನು ಪ್ರಯತ್ನ ಮಾಡುತ್ತೇನೆ. ಸಮಯ ಸಿಗದಿದ್ದರೆ ಅಧಿವೇಶನದನಂತರ ತಮ್ಮ ಜೊತೆಯಲ್ಲಿ ಹೋಗಿ ನೋಡಿಕೊಂಡು ಬರುತ್ತೇನೆ ಎನ್ನುವ ಆಶ್ವಾಸನೆಯನ್ನು ತಮಗೆ ಕೊಡುತ್ತೇನೆ.

ಶ್ರೀ ಪ್ರಭಾಕರ್ ಎಸ್. ರಾಣೆ.—ಗುತ್ತಿಗೆದಾರರು ಕಪ್ಪು ಪಟ್ಟಿಯಲ್ಲಿ ಇಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಮೊದಲು ಅವರು ಕಪ್ಪು ಪಟ್ಟಿಯಲ್ಲಿ ಇದ್ದರು. ಈಗ ಅದನ್ನು ರಿಲ್ಯಾಕ್ಸ್ ಮಾಡಿದ್ದಾರೋ ಏನೋ ಎಂದು ನಾನು ತಿಳಿದುಕೊಳ್ಳಬೇಕಾಗಿದೆ. ಆದರೆ ಇವರಲ್ಲಿ ಒಬ್ಬರು ಕಪ್ಪು ಪಟ್ಟಿಯಲ್ಲಿ ಇದ್ದಾರೆಂಬುದು ನಿರ್ವಿವಾದ ಸಂಗತಿ.

೨–೫೦ ಪಿ. ಎಂ.

ಮತ್ತೆ ಎರಡನೆಯದಾಗಿ ತಾವು ಈ ಬಗ್ಗೆ ತಜ್ಞರ ಸಮಿತಿಯನ್ನು ಮಾಡುತ್ತೇನೆ ಎಂದು ಹೇಳಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಮೊದಲು ಗೃಹ ನಿರ್ಮಾಣ ಮಂಡಳಿಯವರು ಅಲ್ಲಿರುವಂಥ ಇಂಜಿನೀಯರ್‌ರವರಿಂದಲೆ, ಯಾವ ಯಾವ ಕ್ಷೇತ್ರದಲ್ಲಿ ಎಂಥೆಂಥ ಮನೆಗಳು ಆಗಬೇಕೆಂಬ ಬಗ್ಗೆ ನಕ್ಷೆಯನ್ನು ತಯಾರಿಸಿ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಾ ಇದ್ದರು ಆದರೆ ಇತ್ತೀಚಿನ ನಾಲ್ಕಾರು ವರ್ಷಗಳಿಂದ ಅಲ್ಲಿನ ಆರ್ಕಿಟೆಕ್ಟ್‌ಸ್‌ಗಳನ್ನು ಕರೆಸಿಕೊಂಡು ಅವರು ತಯಾರಿಸಿದ ನಕ್ಷೆಯನ್ನು ತೆಗೆದುಕೊಂಡು ಮಂಡಳಿಯ ಇಂಜಿನೀಯರ್‌ಗಳ ಮೇಲೆ ಹೇರುವಂತಹ ಕೆಲಸವನ್ನು ಮಾಡುತ್ತಾ ಇದ್ದಾರೆ. ಇದನ್ನು ದಯವಿಟ್ಟು ನಿಲ್ಲಿಸಬೇಕು. ಅನೇಕ ಜನ ತಜ್ಞರು ನಿಮ್ಮ ಇಲಾಖೆಯಲ್ಲಿ ಇರುವಾಗ ಅವರಿಂದಲೇ ಬೇಕಾದ ನಕ್ಷೆಗಳನ್ನು ಏಕೆ ತಯಾರಿಸಬಾರದು ? ಈ ಜನರಿಗೆ ಕಮೀಶನ್ ಕೊಡುವಂಥ ಕಾರ್ಯಕ್ರಮವನ್ನು ವಿತಕ್ಕಾಗಿ ಮಂಜೂರುಮಾಡಿಕೊಂಡು ಹೋಗಬೇಕು ? ಇನ್ನು ಮುಂದಾದರೂ ಮಂಡಳಿಯ ಇಂಜಿನೀಯರ್‌ಗಳಿಂದಲೇ ಈ ನಕ್ಷೆ ತಯಾರಿಸುವಂತೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಆ ಪ್ರದೇಶದಲ್ಲಿ ಸುಮಾರು ೭೦೦ ಮನೆಗಳನ್ನು ಕಟ್ಟುವುದಕ್ಕೆ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಸುಮಾರು ೭–೮ ಕಿ.ಮೀ. ಪ್ರದೇಶದಲ್ಲಿ ಈ

ಮನೆಗಳ ರಚನೆಯ ಕಾರ್ಯ ನಡೆಯುತ್ತಾ ಇದೆ. ಅಲ್ಲಿ ಕೇವಲ ಒಬ್ಬರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಇಬ್ಬರು ಅಸಿಸ್ಟೆಂಟ್ ಇಂಜಿನೀಯರ್‌ಗಳು ಇದ್ದಾರೆ. ಅಲ್ಲಿ ಸಿಬ್ಬಂದಿ ಕೊರತೆಯಿ ಅಲ್ಲಿ ಎದ್ದು ಕಾಣುತ್ತದೆ. ಅಂಥ ಪ್ರದೇಶದಲ್ಲಿ ಹೆಚ್ಚಿಗೆ ಸಿಬ್ಬಂದಿ ಇದ್ದರೆ ಮನೆಗಳನ್ನು ಕಟ್ಟುವಂಥ ಕಾಲದಲ್ಲಿ ನಿಗಾ ವಹಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿರುವುದೇನೆಂದರೆ, ತಾವು ಕೂಡಲೇ ಆ ಮನೆಗಳನ್ನು ಕಟ್ಟುವುದನ್ನು ನಿಲ್ಲಿಸ ಬೇಕು. ತಜ್ಞರ ವರದಿಯು ಬರಲಿ.' ಅಂತೆಯೇ ತಾವುಗಳು ವಿಚಾರಣೆಗೆ ಕಾರವಾರಕ್ಕೆ ಅಧಿಕಾರಿಗಳನ್ನು ಕಳುಹಿಸಿದಾಗ ಅವರು ಬೀಳುವಂಥ ಮನೆಗಳಿಗೆ ಸಿಮೆಂಟ್ ಪ್ಲಾಸ್ಟರ್ ಮಾಡಿ ಎಂದು ಹೇಳಿದ್ದಾರೆ. ಇಂಥ ತಾತ್ಕಾಲಿಕ ಪರಿಹಾರವನ್ನು ಮಾಡುವುದರಿಂದ ಏನು ಪ್ರಯೋಜನ ಬಂತು ? ಶಾಶ್ವತವಾಗಿ ಗಟ್ಟಿಯಾಗಿ ಉಳಿಯುವಂಥ ಕಾರ್ಯವನ್ನು ಅಲ್ಲಿ ಮಾಡಬೇಕು. ಸಿಮೆಂಟ್ ಪ್ಲಾಸ್ಟರ್ ಮಾಡಿ ಮುಗಿಸುವುದರಿಂದ ಆ ಮನೆಗಳ ಸಮಸ್ಯೆಯು ಬಗೆಹರಿಯುವುದಿಲ್ಲ. ಏಕೆಂದರೆ ಈ ನಕ್ಷೆಯನ್ನು ತಯಾರು ಮಾಡಿದಾಗಲೇ ಸರ್ವಜನಿಕರು ಕೂಡ ಬಹಳಷ್ಟು ದೂರುಗಳನ್ನು ಸರಕಾರಕ್ಕೆ ಕೊಟ್ಟಿದ್ದಾರೆ.

ಉಪಾಧ್ಯಕ್ಷೆಯವರು.—ತಾವುಗಳು ಈಗಾಗಲೇ ೧೦ ನಿಮಿಷಗಳನ್ನು ತೆಗೆದುಕೊಂಡಿದ್ದೀರಿ.

ಶ್ರೀ ಪ್ರಭಾಕರ ಎಸ್. ರಾಣೆ.—ಇವೊತ್ತು ಕಾರವಾರ ಪ್ರದೇಶದಲ್ಲಿ ಕಟ್ಟಿದಂಥ ಮನೆಗಳು ಜನರ ವಾಸ ಯೋಗ್ಯಮನೆಗಳಾಗಿರದೆ ಜನರನ್ನು ಜೀವಂತವಾಗಿ ಹುಗಿಯುವ ಗೋರಿಗಳಾಗುತ್ತವೆ ಎಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಗೃಹ ನಿರ್ಮಾಣ ಮಂಡಳಿಯಂ ಕಟ್ಟಡಗಳ ಬಗ್ಗೆ ವಹಾನ್ ಸದಸ್ಯರು ಎಚ್ಚರಿಕೆ ನೀಡಿದ್ದನ್ನು ಸರಕಾರ ಗಮನಿಸುತ್ತದೆ. ಮಾನ್ಯ ಸದಸ್ಯರು ಆ ಪ್ರದೇಶಕ್ಕೆ ಹೆಚ್ಚಿಗೆ ಸಿಬ್ಬಂದಿಯ ಅವಶ್ಯಕತೆ ಇದೆ ಎಂದು ಹೇಳಿದ್ದುದು ನನಗೆ ಮನವರಿಕೆಯಾಗಿದೆ. ಅಲ್ಲಿಗೆ ಹೆಚ್ಚಿಗೆ ಸಿಬ್ಬಂದಿಯನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಆ ೩೦ ಮನೆಗಳು ಯಾವ ಹಂತದಲ್ಲಿ ಕುಸಿದಿದೆಯೋ ಅವುಗಳನ್ನು ಹೇಗಿದೆಯೋ ಹಾಗೆಯೇ ಇಟ್ಟು ತಜ್ಞರ ಸಮಿತಿಯಂ ಅಲ್ಲಿಗೆ ಬರುವವರೆಗೆ ಹಾಗೆಯೇ ಇಟ್ಟು ಅವರು ಅಲ್ಲಿಗೆ ಹೋಗಿ ಪರಿಶೀಲಿಸಿ ಸವಿಕ್ಷಾಕ್ಷೆ ಮಾಡುವುದಕ್ಕೆ ಮತ್ತು ಅವರ ಅಭಿಪ್ರಾಯಗಳನ್ನು ಕೊಡುವುದಕ್ಕೆ ಅನುಕೂಲವಾಗುವಂತೆ ಯಾವುದೇ ಕಾಮಗಾರಿಗಳನ್ನು ಮಾಡದೇನೆ ಹಾಗೆಯೇ ಇರಿಸಬೇಕೆಂದು ಆದೇಶ ಕೊಟ್ಟಿದ್ದೇನೆ. ಈ ೩೦ ಮನೆಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ತಜ್ಞರ ಸಮಿತಿಯು ಬರುವವರೆಗೆ ಕೆಲಸವನ್ನು ನಿಲ್ಲಿಸುತ್ತಾರೆ. ಇದರಿಂದ ಮಾನ್ಯ ಸದಸ್ಯರಿಗೆ ಸಮಾಧಾನ ಆಗಿದೆ ಎಂದು ಭಾವಿಸುತ್ತೇನೆ.

ಶ್ರೀ ಕೆ. ಹೆಚ್. ಗೌಡ.—ಕಾರವಾರದಲ್ಲಿ ಗೃಹ ನಿರ್ಮಾಣ ಮಂಡಳಿಯವರು ಕಟ್ಟಿದಂಥ ಮನೆಗಳ ಪೈಕಿ ೩೦ ಮನೆಗಳು ಕುಸಿದು ಬಿದ್ದಿವೆ. ಕೆಲವು ಕುಸಿದು ಬೀಳುವ ಹಂತಕ್ಕೆ ಬಂದಿವೆ. ಇನ್ನು ಮುಂದೆ ಕೂಡ ಇದೇ ರೀತಿಯ ಕಳಪೆ ಕಾಮಗಾರಿಗಳು ಮುಂದುವರಿದರೆ ಅಲ್ಲಿ ಇದರಿಂದಾಗಿ ಅನೇಕ ಸಾವು ನೋವುಗಳು ಸಂಭವಿಸಬಹುದು. ಆದುದರಿಂದ ಮುಂದು ಆಗಬಹುದಾದಂಥ ಅನಾಹುತಗಳನ್ನು ತಪ್ಪಿಸುವುದಕ್ಕೋಸ್ಕರವಾಗಿ ಆ ಕಳಪೆ ಕಾಮಗಾರಿಗಳನ್ನು ಅದೇ ಹಂತದಲ್ಲಿ ನಿಲ್ಲಿಸಿ ವಿಚಾರಣೆ ನಡೆಸ ಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರಾದ ಪ್ರಭಾಕರ ರಾಣೆಯವರಿಗೆ ಹೇಳಿದ ಉತ್ತರ ಇವರಿಗೂ ಅನ್ವಯಿಸುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಇವರಿಗೆ ಉತ್ತರ ಹೇಳುವ ಅವಶ್ಯಕತೆ ಇಲ್ಲ.

PAPERS LAID ON THE TABLE OF THE HOUSE

SIR B. SHIVANNA (Minister for Social welfare).—Madam Deputy Speaker, I beg to place on the Table of the House,

"III Report of the Commission on Backward Classes".

MADAM DY. SPEAKER.—Report laid. The Hon. Members are requested to collect the copy of the Report from the Notice Officer